## ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಆಲೂರು

**ಆಶಾ ಕೆ.ಎಸ್, ಬಿ.ಎ.ಎಲ್,ಎಲ್.ಎಲ್.ಬಿ.,**
**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.**
**ಆಲೂರು.**

**ದಿನಾಂಕಃ 6ನೇ ಮಾರ್ಚ್ ಮಾಹೆಯ 2018ರಂದು**

**ಸಿ.ಸಿ. ಸಂಖ್ಯೆಃ 1ಃ2018**

**ಅರ್ಜಿದಾರರುಃ-** ಮಂಜೇಗೌಡ, ತಂದೆಃ ಪೌತಿ ತಿಮ್ಮೇಗೌಡ,
ಪ್ರಾಯಃ 67 ವರ್ಷ,
ವಾಸಃ ಬಂಡಿತಿಮ್ಮನಹಳ್ಳಿ ಗ್ರಾಮ,
ಕಸಬಾ ಹೋಬಳಿ,
ಆಲೂರು ತಾಲೋಕು.

(ಶ್ರೀ ಕೆ.ಕೆ.ಟಿ., ವಕೀಲರು ಪ್ರತಿನಿಧಿಸುತ್ತಾರೆ)

ಃವಿರುದ್ಧಃ

**ಎದುರುದಾರರುಃ-** ತಹಶೀಲ್ದಾರರು, ಆಲೂರು ತಾಲೋಕು,
ಆಲೂರು.

(ಏಕಪಕ್ಷೀಯ)

## ಆ ದೇ ಶ

ಅರ್ಜಿದಾರರು ಅರ್ಜಿಯನ್ನು ಜನನ-ಮರಣ ಅಧಿನಿಯಮ 1969 ಕಲಂ 13(3)ರಡಿಯಲ್ಲಿ ದಾಖಲಿಸಿ, ಎದುರುದಾರರಿಗೆ ಅರ್ಜಿದಾರರ ತಂದೆ ತಿಮ್ಮೇಗೌಡ, ತಂದೆಃ ವೆಂಕಟೇಗೌಡ ಇವರು ದಿನಾಂಕಃ01.10.1984ರಂದು ಆಲೂರು ತಾಲೋಕು, ಕಸಬಾ ಹೋಬಳಿ, ಬಂಡಿತಿಮ್ಮನಹಳ್ಳಿ ಗ್ರಾಮದ ಅವರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಅರ್ಜಿದಾರರ ಮನೆಯವರು ಅವಿದ್ಯಾವಂತರಾಗಿದ್ದು ಸದರಿಯವರು ಮರಣ ದಿನಾಂಕವನ್ನು

ಎದುರುದಾರರ ಕಛೇರಿಯಲ್ಲಿ ತಿಳಿಸಿ ನೊಂದಾವಣಿ ಮಾಡಿಸಿರುವುದಿಲ್ಲ ಅರ್ಜಿದಾರರು ಜಮೀನಿನ ಖಾತೆ ಬದಲಾವಣೆ ಮಾಡಿಸಿಕೊಳ್ಳಲು ಹಾಗೂ ಇತರೆ ಸೌಲಭ್ಯಗಳಿಗಾಗಿ ಸದರಿಯವರ ಮರಣ ದೃಢೀಕರಣ ಪತ್ರವು ಅವಶ್ಯಕವಾಗಿರುತ್ತದೆ. ಅರ್ಜಿದಾರರು ಸದರಿಯವರ ಮರಣ ದೃಢೀಕರಣ ಪತ್ರವನ್ನು ಪಡೆಯುವ ಸಲುವಾಗಿ ಎದುರುದಾರರ ಕಛೇರಿಯಲ್ಲಿ ಸದರಿಯವರ ಮರಣಕ್ಕೆ ಸಂಬಂಧಿಸಿದ ಮರಣ ದೃಢೀಕರಣ ಪತ್ರವನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ಸದರಿ ತಿಮ್ಮೇಗೌಡ, ತಂದೆಃ ವೆಂಕಟೇಗೌಡ ಇವರು ದಿನಾಂಕಃ01.10.1984ರಂದು ಆಲೂರು ತಾಲೋಕು, ಕಸಬಾ ಹೋಬಳಿ, ಬಂಡಿತಿಮ್ಮನಹಳ್ಳಿ ಗ್ರಾಮದಲ್ಲಿ ಮರಣ ಹೊಂದಿರುವ ಬಗ್ಗೆ ಜನನ ಮತ್ತು ಮರಣ ನೊಂದಾವಣೆಯನ್ನು ಪರಿಶೀಲಿಸಿ ಸದರಿ ಜನನ-ಮರಣ ನೊಂದಣಿ ವಹಿಯಲ್ಲಿ ನೊಂದಣಿಯಾಗಿಲ್ಲ ಎಂದು ತಿಳಿಸಿ ದಿನಾಂಕಃ22.12.2017ರಂದು “ಅಲಭ್ಯ ಪ್ರಮಾಣ ಪತ್ರ” ವನ್ನು ನೀಡಿರುತ್ತಾರೆ. ಆದುದರಿಂದ, ಎದುರುದಾರರು ಜನನ ಮತ್ತು ಮರಣ ನೋಂದಣಿ ವಹಿಯಲ್ಲಿ ನೊಂದಣಿ ಮಾಡಿಕೊಂಡು ಅರ್ಜಿದಾರರ ತಂದೆಗೆ ಸಂಬಂಧಪಟ್ಟಂತೆ ಮರಣ ಧೃಡೀಕರಣ ಪತ್ರವನ್ನು ನೀಡುವಂತೆ ಕೋರಿರುತ್ತಾರೆ.

3. ನಂತರ ಅರ್ಜಿದಾರರ ಪರ ವಕೀಲರು ಜನ ಮಿತ್ರ ಕನ್ನಡ ದಿನ ಪತ್ರಿಕೆಯಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಪ್ರಕಟಣೆಯನ್ನು ನೀಡಿದರೂ ಸಹಾ ಯಾವುದೇ ವ್ಯಕ್ತಿಗಳು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸಿರುವುದಿಲ್ಲ.

4. ತದನಂತರ ಅರ್ಜಿದಾರರು ಅರ್ಜಿಯಲ್ಲಿ ಹೇಳಿದ ವಿಚಾರಗಳನ್ನು ರುಜುವಾತುಪಡಿಸುವ ನಿಟ್ಟಿನಲ್ಲಿ ಅರ್ಜಿದಾರರು ತಮ್ಮ ಮುಖ್ಯ

ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿ, ಆಲೂರು ತಹಶೀಲ್ದಾರ್‌ರವರು ನೀಡಿದ ಹಿಂಬರಹವನ್ನು ನಿಪಿ.1ರಂತೆ, ಪತ್ರಿಕಾ ಪ್ರಕಟಣೆಯನ್ನು ನಿಪಿ.2ರಂತೆ ಹಾಜರುಪಡಿಸಿ ಗುರುತಿಸಿಕೊಂಡು ತಮ್ಮ ಪರ ಸಾಕ್ಷ್ಯವನ್ನು ಅಂತ್ಯಗೊಳಿಸಿಕೊಂಡಿರುತ್ತಾರೆ. ಆದ್ದರಿಂದ, ಅರ್ಜಿದಾರರ ಪರ ವಿಚಾರಣೆಯನ್ನು ಮುಕ್ತಾಯಗೊಳಿಸಲಾಯಿತು.

5. ವಾದವನ್ನು ಆಲಿಸಲಾಯಿತು.

6. ಅರ್ಜಿಯಲ್ಲಿ ಹೇಳಿದ ವಿಚಾರಗಳನ್ನು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲಾತಿಗಳನ್ನು ಪರಿಗಣಿಸಿದಾಗ ಈ ಕೆಳಕಂಡ ಅಂಶಗಳು ಪರಿಗಣನೆಗೆ ಬರುತ್ತವೆಃ

1. ಅರ್ಜಿದಾರರು ಈ ಅರ್ಜಿಯಲ್ಲಿ ಕೇಳಿದಂತೆ ನಿರ್ದೇಶನಾತ್ಮಕ ಆದೇಶವನ್ನು ನೀಡಲು ಸೂಕ್ತರಾದಂತಹ ಸಕಾರಣಗಳನ್ನು ರುಜುವಾತು ಗೊಳಿಸಿರುತ್ತಾರೆಯೇ?

2. ಯಾವ ಆದೇಶ?

7. ಈ ಮೇಲಿನ ಅಂಶಗಳಿಗೆ ಈ ಮುಂದೆ ಹೇಳಿದ ಕಾರಣಗಳನ್ನು ನೀಡಿ ಈ ಕೆಳಗಿನಂತೆ ಉತ್ತರಿಸಲಾಯಿತು.

ಒಂದನೇ ಪರಿಗಣನಾಂಶಃ ಸಕಾರಾತ್ಮಕವಾಗಿ

ಎರಡನೇ ಪರಿಗಣನಾಂಶ ಃ ಅಂತಿಮ ಆದೇಶದಂತೆಃ

## ಕಾ ರ ಣ ಗ ಳು

8. ಒಂದನೇ ಪರಿಗಣನಾಂಶಃ ಅರ್ಜಿದಾರರು ಈ ಮೊದಲೇ ಹೇಳಿದಂತೆ ಪ್ರಸ್ತುತ ಅರ್ಜಿಯನ್ನು ಎದುರುದಾರರಿಗೆ ಅರ್ಜಿದಾರರ ತಂದೆಯಾದ ತಿಮ್ಮೇಗೌಡ, ತಂದೆಃ ವೆಂಕಟೇಗೌಡ ಇವರ ಮರಣದ

ದಿನಾಂಕವನ್ನು ಸಂಬಂಧಪಟ್ಟ ಮರಣ ನೊಂದಣಿ ವಹಿಯಲ್ಲಿ ನಮೂದಿಸುವಂತೆ ಕೋರಿರುತ್ತಾರೆ. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಹೇಳಿದಂತಹ ವಿಚಾರಗಳನ್ನು ಪುರಾವೆಗೊಳಿಸುವ ನಿಟ್ಟಿನಲ್ಲಿ ಅರ್ಜಿದಾರರು ನ್ಯಾಯಾಲಯದ ಮುಂದೆ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಮುಖೇನ ಸಾಕ್ಷ್ಯ ನೀಡಿರುತ್ತಾರೆ. ಪಿಡಬ್ಲ್ಯು.1ರವರು ತನ್ನ ಸಾಕ್ಷ್ಯದಲ್ಲಿ ಅರ್ಜಿದಾರರ ತಂದೆಯಾದ ತಿಮ್ಮೇಗೌಡ, ತಂದೆಃ ವೆಂಕಟೇಗೌಡ ಇವರು ದಿನಾಂಕಃ01.10.1984ರಂದು ಆಲೂರು ತಾಲೋಕು, ಕಸಬಾ ಹೋಬಳಿ, ಬಂಡಿತಿಮ್ಮನಹಳ್ಳಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಅರ್ಜಿದಾರರ ಮನೆಯವರು ಅವಿದ್ಯಾವಂತರಾಗಿದ್ದು ಸದರಿಯವರ ಮರಣ ದಿನಾಂಕವನ್ನು ಎದುರುದಾರರ ಕಛೇರಿಯಲ್ಲಿ ತಿಳಿಸಿ ನೊಂದಾವಣಿ ಮಾಡಿಸಿರುವುದಿಲ್ಲ. ಅರ್ಜಿದಾರರು ಜಮೀನಿನ ಖಾತೆ ಬದಲಾವಣೆ ಮಾಡಿಸಿಕೊಳ್ಳಲು ಹಾಗೂ ಇತರೆ ಸೌಲಭ್ಯಗಳಿಗಾಗಿ ಸದರಿಯವರ ಮರಣ ದೃಢೀಕರಣ ಪತ್ರವು ಅವಶ್ಯಕವಾಗಿರುತ್ತದೆ. ಅರ್ಜಿದಾರರು ಸದರಿಯವರ ಮರಣ ದೃಢೀಕರಣ ಪತ್ರವನ್ನು ಪಡೆಯುವ ಸಲುವಾಗಿ ಎದುರುದಾರರ ಕಛೇರಿಯಲ್ಲಿ ಸದರಿಯವರ ಮರಣಕ್ಕೆ ಸಂಬಂಧಿಸಿದ ಮರಣ ದೃಢೀಕರಣ ಪತ್ರವನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ಸದರಿ ತಿಮ್ಮೇಗೌಡ, ತಂದೆಃ ವೆಂಕಟೇಗೌಡ ಇವರು ದಿನಾಂಕಃ01.10.1984ರಂದು ಆಲೂರು ತಾಲೂರು, ಕಸಬಾ ಹೋಬಳಿ, ಬಂಡಿತಿಮ್ಮನಹಳ್ಳಿ ಗ್ರಾಮದಲ್ಲಿ ಮರಣ ಹೊಂದಿರುವ ಬಗ್ಗೆ ಜನನ ಮತ್ತು ಮರಣ ನೊಂದಾವಣೆಯನ್ನು ಪರಿಶೀಲಿಸಿ ಸದರಿ ಜನನ-ಮರಣ ನೊಂದಣಿ ವಹಿಯಲ್ಲಿ ನೊಂದಣಿಯಾಗಿಲ್ಲ ಎಂದು ತಿಳಿಸಿ ದಿನಾಂಕಃ22.12.2017ರಂದು "ಅಲಭ್ಯ ಪ್ರಮಾಣ ಪತ್ರ" ವನ್ನು ನೀಡಿರುತ್ತಾರೆ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅಲ್ಲದೇ ಅವರ ಸಾಕ್ಷ್ಯಕ್ಕೆ ಪೂರಕವಾಗಿ ಎದುರುದಾರರು ನೀಡಿದ ಹಿಂಬರಹ

ಹಾಗೂ ಪತ್ರಿಕಾ ಪ್ರಕಟಣೆಯನ್ನೂ ಸಹಾ ಈ ನ್ಯಾಯಾಲಯ ಸಮ್ಮುಖ ಹಾಜರುಪಡಿಸಿರುತ್ತಾರೆ. ನಿಪಿ.1ನ್ನು ಪರಿಗಣಿಸಿದಾಗ ಅರ್ಜಿದಾರರ ತಂದೆಯಾದ ತಿಮ್ಮೇಗೌಡ, ತಂದೆಃ ವೆಂಕಟೇಗೌಡ ಇವರ ಮರಣದ ದಿನಾಂಕವು ನೊಂದಣಿಯಾಗದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಅರ್ಜಿದಾರರು ಇದರ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ನೀಡಿದರೂ ಸಹ ಯಾವುದೇ ವ್ಯಕ್ತಿಗಳು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸಿರುವುದಿಲ್ಲ ಮತ್ತು ಅರ್ಜಿದಾರರ ಸಾಕ್ಷ್ಯವನ್ನು ಅಲ್ಲಗಳೆಯುವ ಯಾವುದೇ ಸಂಗತಿಗಳು ನ್ಯಾಯಾಲಯದ ಮುಂದೆ ಇಲ್ಲದಿರುವ ಕಾರಣ ಅರ್ಜಿದಾರರ ಸಾಕ್ಷ್ಯವನ್ನು ನಂಬದಿರಲು ಯಾವುದೇ ಸಕಾರಣಗಳು ಕಂಡು ಬರುವುದಿಲ್ಲ. ಆದ್ದರಿಂದ ನ್ಯಾಯಾಲಯವು ಅರ್ಜಿದಾರರು ಹಾಜರುಪಡಿಸಿರುವ ಸಾಕ್ಷ್ಯವನ್ನು ನಂಬುತ್ತದೆ. ಜೊತೆಗೆ ಅರ್ಜಿದಾರರು ತಾವು ತಮ್ಮ ಅರ್ಜಿಯಲ್ಲಿ ಕೇಳಿರುವ ಪರಿಹಾರಕ್ಕೆ ಅರ್ಹರಿರುವುದಾಗಿ ಈ ನ್ಯಾಯಾಲಯ ಅಭಿಪ್ರಾಯ ಪಡುತ್ತದೆ ಮತ್ತು ಸದರಿ ಅಂಶವನ್ನು ಸಕಾರಾತ್ಮಕವಾಗಿ ಉತ್ತರಿಸಿದೆ.

9. <u>ಎರಡನೇ ಪರಿಗಣನಾಂಶಃ</u> ಈ ಮೊದಲು ಒಂದನೇ ಪರಿಗಣನಾಂಶದಲ್ಲಿ ವಿವರಿಸಿದ ಕಾರಣಗಳಿಂದ ಈ ಕೆಳಕಂಡಂತೆ ಆದೇಶಿಸಿ ಎರಡನೇ ಪರಿಗಣನಾಂಶವನ್ನು ಉತ್ತರಿಸಲಾಯಿತು.

**ಃ ಆ ದೇ ಶ ಃ**

ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಿದೆ.

ಶ್ರೀ ತಿಮ್ಮೇಗೌಡ, ತಂದೆಃ ವೆಂಕಟೇಗೌಡ ಇವರು ದಿನಾಂಕಃ01.10.1984ರಂದು ಮರಣ ಹೊಂದಿರುವುದಾಗಿ ಎದುರುದಾರರು ಸಂಬಂಧಿಸಿದ ನೊಂದಣಿ ವಹಿಯಲ್ಲಿ

ಸದರಿಯವರ ಮರಣ ದಿನಾಂಕವನ್ನು ನಮೂದಿಸುವುದು ಮತ್ತು ಅದಕ್ಕೆ ತಗಲುವ ಶುಲ್ಕವನ್ನು ಅರ್ಜಿದಾರರಿಂದ ಭರಿಸಿಕೊಳ್ಳತಕ್ಕದ್ದು.

(ಮೇಲ್ಕಂಡ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿದ್ದನ್ನು ಓದಿ, ಪರಿಶೀಲಿಸಿ, ತಿದ್ದುಪಡಿ ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ದಿನಾಂಕ 6ನೇ ಮಾರ್ಚ್ ಮಾಹೆಯ 2018ರಂದು ಉಚ್ಛರಿಸಲಾಯಿತು)

(ಆಶಾ ಕೆ.ಎಸ್)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಆಲೂರು.

ಃ **ಅನುಸೂಚಿ** ಃ

**ಅರ್ಜಿದಾರರ ಪರ ವಿಚಾರಣೆ ಮಾಡಿದ ಸಾಕ್ಷಿದಾರರು**

ಪಿಡಬ್ಲ್ಯೂ 1 ಃ ಮಂಜೇಗೌಡ

**ಅರ್ಜಿದಾರರ ಪರ ಗುರುತಿಸಿಕೊಂಡ ದಾಖಲೆಗಳುಃ**

ನಿಶಾನೆ ಪಿ 1 ಃ ಹಿಂಬರಹ
ನಿಶಾನೆ ಪಿ 2 ಃ ಪತ್ರಿಕಾ ಪ್ರಕಟಣೆ

**ಎದುರುದಾರರ ಪರ ವಿಚಾರಣೆಯಾದ ಸಾಕ್ಷಿಗಳು ಮತ್ತು ದಾಖಲೆಗಳುಃ-**

- ಇಲ್ಲ -

ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ. ಆಲೂರು.